ದಿಃ6.10.2016 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ 3 , 8 , 9 ಮತ್ತು 11 ರಿಂದ 14ನೇ ಪ್ರತಿವಾದಿ ಪರ ವಕೀಲರಿಂದಃ-

1ನೇ ಪ್ರತಿವಾದಿ ಸಂಸ್ಥೆಯವರು ಯರಗನಹಳ್ಳಿ ಗ್ರಾಮದ ಸರ್ವೆ ನಂ.54 ರಿಂದ 61 , 67 ಮತ್ತು 68 ರಲ್ಲಿ ಭೂ ಪರಿವರ್ತನೆ ಮಾಡಿ ನಿವೇಶನಗಳನ್ನು ಮಾಡಿರುತ್ತಾರೆ ಅನ್ನುವುದು ಸರಿಯಲ್ಲ. ಆ ನಿವೇಶನಗಳ ಪೈಕಿ 94ನೇ ಸಾಲಿನಲ್ಲಿ 1ನೇ ಪ್ರತಿವಾದಿ ಸೊಸೈಟಿಯವರು 8ನೇ ಪ್ರತಿವಾದಿಗೆ ಒಂದು ನಿವೇಶನವನ್ನು ಮಾರಿದ ವಿಚಾರ ನನಗೆ ಗೊತ್ತಿಲ್ಲ. ಆ ನಿವೇಶನ 8ನೇ ಪ್ರತಿವಾದಿ ಸ್ವಾಧೀನದಲ್ಲಿದೆ ಅನ್ನುವುದು ಸರಿಯಲ್ಲ. ಸದರಿ ನಿವೇಶನಕ್ಕೆ 1ನೇ ಪ್ರತಿವಾದಿ ,8ನೇ ಪ್ರತಿವಾದಿಗೆ ಟೈಟಲ್ ಡೀಡನ್ನು ಕೊಟ್ಟಿದ್ದಾರೆ ಅನ್ನುವುದು ಸರಿಯಲ್ಲ.

ಸದರಿ ನಿವೇಶನದ ಬಾಬ್ತು 8ನೇ ಪ್ರತಿವಾದಿ ನನ್ನ ಅಣ್ಣ ಅಂದರೆ ಈ ಕೇಸಿನ ಮೃತ 10ನೇ ಪ್ರತಿವಾದಿ ಮೇಲೆ ಇಂಜಂಕ್ಷನ್ ದಾವೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಆ ದಾವೆ 8ನೇ ಪ್ರತಿವಾದಿ ಪರ ಡಿಕ್ರಿ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಆ ನಂತರ ಮೃತ 10ನೇ ಪ್ರತಿವಾದಿ ನನ್ನ ತಾಯಿ ಅಂದರೆ ಈ ಕೇಸಿನ ಮೃತ ವಾದಿ ಮೇಲೆ ಇಂಜಂಕ್ಷನ್ ದಾವೆ ಮಾಡಿರುತ್ತಾರೆ ಅನ್ನುವ ವಿಚಾರ ನನಗೆ ಗೊತ್ತಿಲ್ಲ.

8ನೇ ಪ್ರತಿವಾದಿ ನಂತರದಲ್ಲಿ ದಿಃ24.1.2006 ರಂದು ಆ ನಿವೇಶನವನ್ನು 11ನೇ ಪ್ರತಿವಾದಿಗೆ ಮಾರಿದ್ದಾರೆ ಅನ್ನುವುದು ಸರಿಯಲ್ಲ. 3,7,8 ಮತ್ತು 9ನೇ ಪ್ರತಿವಾದಿಗಳು ನಿವೇಶನವನ್ನು ಕೊಂಡು ಅಲ್ಲಿ ಕಾಪೌಂಡಗಳನ್ನು ಹಾಕಿದ್ದೆವು ಅನ್ನುವುದು ಸರಿಯಲ್ಲ. ಆ ಸ್ವತ್ತುಗಳು ರಾಜ್‌ಕುಮಾರ್ ರಸ್ತೆಯ ಪಶ್ಚಿಮಕ್ಕೆ ಬರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮದು ಇದೆ ಅಂತ ಹೇಳುತ್ತಾರೆ.

ಈ ಕೇಸಿನ 3ನೇ ಪ್ರತಿವಾದಿ ಈ ಕೇಸಿನ 10ನೇ ಪ್ರತಿವಾದಿ ಮೇಲೆ ಇಂಜಂಕ್ಷನ್ ದಾವೆ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ಆ ದಾವೆ ಕೂಡ 3ನೇ ಪ್ರತಿವಾದಿ ಪರ ಡಿಕ್ರಿ ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರ ಕೊಡದೇ ಸುಮ್ಮನೆ ನಿಂತಿರುತ್ತಾರೆ. ನನ್ನ ಅಣ್ಣ ಮತ್ತು ತಾಯಿ ಚೆನ್ನಾಗಿದ್ದರು ಅನ್ನುವುದು ಸರಿಯಲ್ಲ. ದಾವಾ ಸರ್ವೆ ನಂ.176 ರ ಜಮೀನಿನಲ್ಲಿ

ನಿವೇಶನಗಳನ್ನು ಮಾಡಿ ನನ್ನ ತಾಯಿ ಮತ್ತು ಅಣ್ಣ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ ಅನ್ನುವುದು ಸರಿಯಲ್ಲ.

ಈ ಕೇಸಿನ 9ನೇ ಪ್ರತಿವಾದಿ ಕೂಡ ಈ ಕೇಸಿನ 10ನೇ ಪ್ರತಿವಾದಿ ಮೇಲೆ ಇಂಜಂಕ್ಷನ್ ದಾವೆ ಮಾಡಿದ್ದು ಅದೂ ಕೂಡ ಡಿಕ್ರಿಯಾಗಿದೆ ಅನ್ನುವುದು ಸರಿಯಲ್ಲ. ಸರ್ವೆ ನಂ.176 ರ ಆರ್‌ಟಿಸಿ ನನ್ನ ಅಣ್ಣನ ಹೆಸರಿನಲ್ಲಿತ್ತು. ಸದರಿ ಸರ್ವೆ ನಂ.176 ರ ಆಸ್ತಿಯನ್ನು ನನ್ನ ತಾಯಿ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ.

1ನೇ ಪ್ರತಿವಾದಿ ಮಾರಾಟ ಮಾಡಿರುವ ಸೈಟಿಗೂ ಯಾವುದೇ ಸಂಬಂಧವಿಲ್ಲ ಅಂತ ಹೇಳುವುದು ನಿಜವಲ್ಲ. 1ನೇ ಪ್ರತಿವಾದಿ ಮಾರಾಟ ಮಾಡಿರುವ ನಿವೇಶನ ಅವರ ಹೆಸರಿನಲ್ಲೇ ಇದ್ದು ಅವರೇ ಕಂದಾಯ ಇತ್ಯಾದಿ ಕಟ್ಟುತ್ತಿದ್ದಾರೆ ಅನ್ನುವುದು ಸರಿಯಲ್ಲ. ದಾವಾ ಸ್ವತ್ತು ತಾಯಿಯ ಸ್ವಾಧೀನದಲ್ಲಿದೆ ಇದೆ ಅಂದರೆ ಸಾಕ್ಷಿ ದಾಖಲೆಗಳನ್ನು ವಕೀಲರ ಬಳಿ ಕೊಟ್ಟಿರುತ್ತೇನೆ ಅಂತ ಸಾಕ್ಷಿ ಹೇಳುತ್ತಾರೆ. 1ನೇ ಪ್ರತಿವಾದಿಗಳು ನಮ್ಮ ಜಮೀನಿನಲ್ಲಿ ಒತ್ತುವರಿ ಮಾಡಿದ್ದಾರೆ ಅಂತ ಎಲ್ಲಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

ದಾವಾ ಸರ್ವೆ ನಂ.ನಲ್ಲಿ ಈಗಾಗಲೇ ರೆವಿನ್ಯೂ ನಿವೇಶನಗಳನ್ನಾಗಿ ಮಾಡಲಾಗಿದೆ ಎಂದರೆ ಸರಿ. 3,7,8 ಮತ್ತು 9ನೇ ಪ್ರತಿವಾದಿಗಳು ದಾವೆಗಳನ್ನು ಮಾಡಿದ್ದು ಆ ದಾವೆಗಳು ಡಿಕ್ರಿಯಾದ ಮೇಲೆ ನಾವು ಮತ್ತು 10ನೇ ಪ್ರತಿವಾದಿ ನನ್ನ ತಾಯಿಯನ್ನು ಎತ್ತಿಕಟ್ಟಿ ಈ ಸುಳ್ಳು ದಾವೆ ಮಾಡಿಸಿರುತ್ತೇವೆ ಅನ್ನುವುದು ಸರಿಯಲ್ಲ.

1ನೇ ಪ್ರತಿವಾದಿ ಸೊಸೈಟಿಯವರು ಕ್ಯಾತಮಾರನಹಳ್ಳಿ ಗ್ರಾಮದ ಸರ್ವೆ ನಂ. ಜಮೀನುಗಳಲ್ಲಿ ಯಾವುದೇ ನಿವೇಶನಗಳನ್ನು ಮಾಡಿರುವುದಿಲ್ಲ. ಅನ್ನುವುದು ಸರಿಯಲ್ಲ. ಈ ಬಗ್ಗೆ ನನ್ನ ಅಣ್ಣ 10ನೇ ಪ್ರತಿವಾದಿ ಮೈಸೂರು ತಹಶೀಲ್ದಾರ್‌ರವರಿಗೆ ಅರ್ಜಿ ಕೊಟ್ಟಿದ್ದು , ಅವರು ಎರಗನಹಳ್ಳಿ ಗ್ರಾಮದಲ್ಲಿ ನಿವೇಶನ ಮಾಡಲಾಗಿದೆ ಅಂತ ವರದಿ ಕೊಟ್ಟಿದ್ದಾರೆ ಅಂತ ಹೇಳುವುದು ಸರಿಯಲ್ಲ.

**ಒ ಎಸ್ 248 /2006** **ಡಿಡಬ್ಲ್ಯೂ:1**

**8ನೇ ಪ್ರತಿವಾದಿ ,11ನೇ ಪ್ರತಿವಾದಿಗೆ ನಿವೇಶನ ಮಾರಿದ ವಿಚಾರ ಗೊತ್ತಿದ್ದರೂ ಸಹಾ , ನಾವು ಉದ್ದೇಶಪೂರ್ವಕವಾಗಿ ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅವರು ಯಾರು ಅಂತ ಗೊತ್ತಿಲ್ಲ ಅಂತ ಹೇಳುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸರಿ ಇದೆ,

Sd/-

ಲಘು ವ್ಯವಹಾರಗಳ ಮತ್ತು ಸಿವಿಲ್

ನ್ಯಾಯಾಧೀಶರು (ಹಿ.ವಿ), ಮೈಸೂರು.